## ಕರ್ನಾಟಕ ಸರ್ಕಾರದ ನಡಾವಳಿಗಳು

ವಿಷಯ: ಡಿಆರ್‌ಡಿಎ ಅಡಳಿತ ಯೋಜನೆ ಲೆಕ್ಕ ಶೀರ್ಷಿಕೆ 2515–00–196–6–06 ಯಡಿ ಅನುದಾನವನ್ನು ಮನರ್ವಿನಿಯೋಗದ ಮೂಲಕ ಭರಿಸುವ ಬಗ್ಗೆ.

ಓದಲಾಗಿದೆ:
1) ಸರ್ಕಾರದ ಆದೇಶದ ಸಂಖ್ಯೆ ಗ್ರಾಅಪ 6 ಎಸ್‌ಜೆವೈ [ಡಿಆರ್‌ಡಿಎ] 2012, ಬೆಂಗಳೂರು, ದಿನಾಂಕ 05.11.2012.
2) ಸರ್ಕಾರದ ಆದೇಶದ ಸಂಖ್ಯೆ ಗ್ರಾಅಪ 4 ಎಸ್‌ಜೆವೈ [ಡಿಆರ್‌ಡಿಎ] 2012, ಬೆಂಗಳೂರು, ದಿನಾಂಕ 26.11.2012.
3) ಕೇಂದ್ರ ಸರ್ಕಾರದ ಪತ್ರದ ನಂ:ಆರ್–17014/11/2012–13 ಡಿಆರ್‌ಡಿಎ [ಎಸ್‌ಎಲ್‌ನಂ.109] ದಿನಾಂಕ 28.02.2013.

–:0:–

ಪ್ರಸ್ತಾವನೆ:

ಡಿಆರ್‌ಡಿಎ ಅಡಳಿತ ಯೋಜನೆಯಡಿ ಲೆಕ್ಕ ಶೀರ್ಷಿಕೆ 2515–00–196–6–06 ಯಡಿ 2012–2013ನೇ ಸಾಲಿಗೆ ರಾಜ್ಯದ ಆಯವ್ಯಯದಲ್ಲಿ ರಾಜ್ಯದ ಪಾಲಿನ ಅನುದಾನ ರೂ.959.88 ಲಕ್ಷಗಳನ್ನು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ ಹಂಚಿಕೆ ಮಾಡಿದೆ. ಈ ಯೋಜನೆಯು ಕೇಂದ್ರ ಮರಸ್ಕೃತ ಯೋಜನೆಯಾಗಿರುವುದರಿಂದ ರಾಜ್ಯವು ಕೇಂದ್ರದ ಪಾಲಿನ ಅನುದಾನಕ್ಕನುಗುಣವಾಗಿ ರಾಜ್ಯದ ಪಾಲಿನ ಅನುದಾನ ಬಿಡುಗಡೆ ಮಾಡಬೇಕಾಗಿದೆ. ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯ, ನವದೆಹಲಿ, ಓದಲಾಗಿದೆ [3]ರಲ್ಲಿ ಶಿವಮೊಗ್ಗ ಜಿಲ್ಲಾ ಪಂಚಾಯತ್‌ಗೆ 2012–13ನೇ ಸಾಲಿನ ಎರಡನೇ ಕಂತಿನ ಅನುದಾನ ರೂ.19.81 ಲಕ್ಷ ಬಿಡುಗಡೆ ಮಾಡಿದೆ. ಇದಕ್ಕನುಗುಣವಾಗಿ ರಾಜ್ಯದ ಪಾಲಿನ ಅನುದಾನ ರೂ.6.60 ಲಕ್ಷ ಬಿಡುಗಡೆ ಮಾಡಬೇಕಾಗಿದೆ. ಆದರೆ, ಆಯವ್ಯಯದಲ್ಲಿ 2012–13ನೇ ಶಿವಮೊಗ್ಗ ಜಿಲ್ಲಾ ಪಂಚಾಯತ್‌ಗೆ ಒದಗಿಸಿರುವ ಅನುದಾನ ಮೂರ್ಣವಾಗಿ ವೆಚ್ಚವಾಗಿರುವುದರಿಂದ ಅನುದಾನದ ಲಭ್ಯತೆ ಇರುವುದಿಲ್ಲ. ಯಾದಗಿರಿ ಜಿಲ್ಲಾ ಪಂಚಾಯತ್ ಸದರಿ ಸಾಲಿಗೆ ಎರಡನೇ ಕಂತಿನ ಅನುದಾನದ ಅವಶ್ಯಕತೆ ಇಲ್ಲವೆಂದು ತಿಳಿಸಿರುವ ಕಾರಣ ಯಾದಗಿರಿ ಜಿಲ್ಲಾ ಪಂಚಾಯತ್‌ನಲ್ಲಿ ರೂ.10.46 ಲಕ್ಷ ಲಭ್ಯವಿರುತ್ತದೆ. ಈ ಅನುದಾನದಿಂದ ರೂ.6.60 ಲಕ್ಷ ಅನುದಾನವನ್ನು ಮನರ್ವಿನಿಯೋಗದ ಮೂಲಕ ಶಿವಮೊಗ್ಗ ಜಿಲ್ಲಾ ಪಂಚಾಯತಿಗೆ ನೀಡಬೇಕಾಗಿದೆ. ಆದುದರಿಂದ ಈ ಆದೇಶ.

### ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 6 ಎಸ್‌ಜೆವೈ ಡಿಆರ್‌ಡಿಎ 2012, ಬೆಂಗಳೂರು, ದಿನಾಂಕ: 22.03.2013

ಡಿಆರ್‌ಡಿಎ ಅಡಳಿತ ಯೋಜನೆಯಡಿ ಲೆಕ್ಕ ಶೀರ್ಷಿಕೆ 2515–00–196–6–06 ಯಡಿ 2012–2013 ನೇ ಸಾಲಿಗೆ ರಾಜ್ಯ ಸರ್ಕಾರವು ಶಿವಮೊಗ್ಗ ಜಿಲ್ಲಾ ಪಂಚಾಯತ್‌ಗೆ ಅಗತ್ಯವಿರುವ ರೂ.6.60 ಲಕ್ಷ ಗಳನ್ನು (ರೂ. ಆರು ಲಕ್ಷದ ಅರವತ್ತು ಸಾವಿರ ಮಾತ್ರ) ಮನರ್ವಿನಿಯೋಗದ ಮೂಲಕ ಭರಿಸಲು ಮಂಜೂರಾತಿ ನೀಡಿದೆ. ವಿವರಗಳನ್ನು ಮನರ್ವಿನಿಯೋಗದ ತಃಖ್ತೆಯಲ್ಲಿ ನೀಡಿದೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 9 ಟಿಎಫ್‌ಪಿ 2005 ದಿನಾಂಕ 07.04.2005 ರಲ್ಲಿ ಆಡಳಿತ ಇಲಾಖೆಯ ಪ್ರಧಾನಕಾರ್ಯದರ್ಶಿ/ ಕಾರ್ಯದರ್ಶಿಗಳಿಗೆ ಪ್ರದತ್ತವಾದ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಡಾ:ಇ.ವಿ. ರಮಣ ರೆಡ್ಡಿ)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ: ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ ಇವರಿಗೆ ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸಲು ಕೋರಲಾಗಿದೆ.

ಪ್ರತಿ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2. ಮಹಾಲೇಖಪಾಲರು (ಆಡಿಟ್), ಕರ್ನಾಟಕ, ಬೆಂಗಳೂರು.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಶಿವಮೊಗ್ಗ ಮತ್ತು ಯಾದಗಿರಿ ಜಿಲ್ಲಾ ಪಂಚಾಯತ್‌ಗಳ ಮುಂದಿನ ಸೂಕ್ತಕ್ರಮಕ್ಕಾಗಿ.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು [ಪಂ.ರಾ] ಗ್ರಾ ಅ ಪಂರಾ ಇಲಾಖೆ ಇವರುಗಳ ಆಪ್ತ ಕಾರ್ಯದರ್ಶಿಗಳಿಗೆ.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, (ವೆಚ್ಚ), ಆರ್ಥಿಕ ಇಲಾಖೆ, ವಿಧಾನಸೌಧ, ಇವರ ಆಪ್ತ ಕಾರ್ಯದರ್ಶಿಗಳಿಗೆ.
6. ಸರ್ಕಾರದ ಅಧೀನ ಕಾರ್ಯದರ್ಶಿ (ಎಫ್‌ಆರ್‌ಸಿ), ಆರ್ಥಿಕ ಇಲಾಖೆ, ಬೆಂಗಳೂರು.
7. ಆಂತರಿಕ ಆರ್ಥಿಕ ಸಲಹೆಗಾರರು : ಉಪ ನಿರ್ದೇಶಕರು {ಸ್ವಉಕಾ}, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಸಹಾಯಕರಿಗೆ.
8. ನಿರ್ದೇಶಕರು, ಖಜಾನೆ ಇಲಾಖೆ, ಪೋಡಿಯಂ ಬ್ಲಾಕ್, ವಿವಿ ಟವರ್, ಬೆಂಗಳೂರು – 560 001.
9. ಉಪ ನಿರ್ದೇಶಕರು, ಖಜಾನೆ ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, ನಂ.49, 2ನೇ ಮಹಡಿ, ಖನಿಜ ಭವನ (ಸರ್ಕಾರಿ ಬ್ಲಾಕ್) ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
10. ಶಿವಮೊಗ್ಗ ಮತ್ತು ಯಾದಗಿರಿ ಜಿಲ್ಲೆಯ ಖಜಾನಾಧಿಕಾರಿಗಳಿಗೆ.
11. ಶಾಖಾಧಿಕಾರಿ, ಪತ್ರ ಸ್ವೀಕಾರ ಮತ್ತು ರವಾನೆ ಶಾಖೆ /ಮಾಹಿತಿ ಕೇಂದ್ರ/ಕರ್ನಾಟಕ ವಿಕಾಸ/ಲೆಕ್ಕ ಸಮನ್ವಯ
12. ರಕ್ಷಾ ಕಡತ : ಹೆಚ್ಚುವರಿ ಪ್ರತಿ.

–:0:–

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಯೋಜನೆ : ಡಿಆರ್‌ಡಿಎ (ಆಡಳಿತ)

ಸ್ವಯಂ ಉದ್ಯೋಗ ಕಾರ್ಯಕ್ರಮ

ು ಪತ್ರದಲ್ಲಿ ಅಥವಾ ಹೆಚ್ಚಿನ ಹಂಚಿಕೆ (ಅಲಾಟ್‌ಮೆಂಟ್) ಗಳಲ್ಲಿ ಉಪಬಂಧ ಕಲ್ಪಿಸಿಲ್ಲದ ಎಲ್ಲಾ ವಿನಿಯೋಗಗಳಿಗೆ ಅಥವಾ ಮಂಜೂರಾತಿಗೆ ಲಗತ್ತಿಸಬೇಕಾದ ಮರುವಿನಿಯೋಗದ ವಿವರಣೆ

2012-13

(ರೂ. ಲಕ್ಷಗಳಲ್ಲಿ)

| ಕ ಪತ್ರದ ಪ್ರಧಾನ ಚಿಕ್ಕ ಉಪ ವಿವರವಾದ ಶೀರ್ಷಿಕೆಗಳು<br>ಇತರೆ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು<br>5 - ಜಿಲ್ಲಾ ಪಂಚಾಯತಿಗಳಿಗೆ ಸಹಾಯ<br>ಲ್ಲಾ ಪಂಚಾಯತ್<br>ಆರ್‌ಡಿಎ ಆಡಳಿತಾತ್ಮಕ ವೆಚ್ಚ (ಕೇಂದ್ರ ಪುರಸ್ಕೃತ ಯೋಜನೆ)<br>00-196-6-06 | | ಹೆಚ್ಚಿಸಲು ಪ್ರಸ್ತಾವಿಸಲಾದ ಆಂದಾಜಿನ ಶೀರ್ಷಿಕೆ 2515-00-196-6-06 | | | | ಕಡಿಮೆ ಮಾಡಲು ಪ್ರಸ್ತಾವಿಸಲಾದ ಅಂದಾಜಿನ ಶೀರ್ಷಿಕೆ - 2515-00-196-6-06 | | | | ಪರಾ ಹಣ ಹಂಚಿಕೆ (ಅಲಾಟ್‌ಮೆಂಟ್) ಮೀರಿರುವುದಕ್ಕೆ ಮತ್ತು ಉಳಿತಾಯ ನಿರೀಕ್ಷಿಸುವುದಕ್ಕೆ ಕಾರಣಗಳನ್ನು ಇಲ್ಲಿ ಪೂರ್ಣವಾಗಿ ವಿವರಿಸಬೇಕು |
|---|---|---|---|---|---|---|---|---|---|---|
| ಜಿಲ್ಲಾ ಕೋಡ್ | ಜಿಲ್ಲಾ ಪಂಚಾಯತ್ | ಮಂಜೂರಾದ ಆಯವ್ಯಯ ಅಂದಾಜಿನಲ್ಲಿ ರುವ ಮೊತ್ತ | ಈವರೆಗೆ ಆಗಿರುವ ವಾಸ್ತವಿಕ ವೆಚ್ಚ (ಎಂದರೆ) | ವರ್ಷದ ಉಳಿದ ಅವಧಿಯಲ್ಲಿ ಸಂಭವ ನೀಯ ವೆಚ್ಚ | ಬೇಕಾದ ಹೆಚ್ಚಿನ ಅಲಾಟ್ ಮೆಂಟ್ ವಿವರ | ಮಂಜೂ ರಾದ ಆಯವ್ಯಯ ಅಂದಾಜಿ ನಲ್ಲಿರುವ ಮೊತ್ತ | ಈವರೆಗೆ ಆಗಿರುವ ವಾಸ್ತವಿಕ ವೆಚ್ಚ (ಎಂದರೆ) | ವರ್ಷದ ಉಳಿದ ಅವಧಿ ಯಲ್ಲಿ ಸಂಭವ ನೀಯ ವೆಚ್ಚ | ಪುನರ್ವಿನಿ ಯೋಗಕ್ಕೆ ಲಭ್ಯವಿರುವ ಮೊತ್ತ | |
| 1 | | 2 | 3 | 4 | 5 | 6 | 7 | 8 | 9 | 10 |
| 405 | ಶಿವಮೊಗ್ಗ | 29.07 | 29.07 | 6.60 | 6.60 | | | | | ಶಿವಮೊಗ್ಗ ಜಿಲ್ಲಾ ಪಂಚಾಯತ್‌ಗೆ ಕೇಂದ್ರ ಸರ್ಕಾರ 2012-13 ನೇ ಎರಡನೇ ಕಂತಿನ ಅನುದಾನ ರೂ.19.81 ಬಿಡುಗಡೆ ಮಾಡಿದೆ. ಇದಕ್ಕನುಗುಣವಾಗಿ ರಾಜ್ಯದ ಆಯವ್ಯಯದಲ್ಲಿ ರಾಜ್ಯದ ಪಾಲಿನ ಅನುದಾನ ರೂ. 6.60 ಬಿಡುಗಡೆ ಮಾಡಬೇಕಿದ್ದು ಆಯವ್ಯಯದಲ್ಲಿ ಅನುದಾನ ಒದಗಿಸಿಲ್ಲ. ಯಾದಗಿರಿ ಜಿಲ್ಲಾ ಪಂಚಾಯತ್ ಎರಡನೇ ಕಂತಿನ ಅನುದಾನದ ಅವಶ್ಯಕತೆ ಇಲ್ಲವೆಂದು ತಿಳಿಸಿರುವ ಕಾರಣ, ಆ ಜಿಲ್ಲಾ ಪಂಚಾಯತ್‌ನಲ್ಲಿ ಉಳಿಯುವ ಅನುದಾನವನ್ನು ಪುನರ್ವಿನಿಯೋಗಕ್ಕೆ ಉಪಯೋಗಿಸಿಕೊಳ್ಳಲಾಗುವುದು. |
| | ಒಟ್ಟು | 29.07 | 29.07 | 6.60 | 6.60 | | | | | |
| 421 | ಯಾದಗಿರಿ | | | | | 20.93 | 10.47 | 3.86 | 6.60 | |
| | ಒಟ್ಟು | | | | | 20.93 | 10.47 | 3.86 | 6.60 | |

IN

(ಡಾ : ಇ.ವಿ. ರಮಣ ರೆಡ್ಡಿ)

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.